ಸೆಲೆಬ್ರಿಟಿ

■ ಹನಿ

## ಡೇರ್ ಆ್ಯಂಡ್ ಡರ್ಟಿ



ವೀಣಾ ಮಲಿಕ್ ಎಂಬ ಈ 'ದೊಡ್ಡ ಬಾಯಿಯ ಪಾಕಿಸ್ತಾನಿ ಸುಂದರಿ' ಕನ್ನಡ ಚಿತ್ರರಂಗಕ್ಕೂ ಬಿರುಗಾಳಿಯಂತೆ ನುಗ್ಗಿದ್ದಾಳೆ. ಈಕೆ ನಟಿಸಲಿರುವ ಕನ್ನಡದ 'ಡರ್ಟಿ ಪಿಕ್ಚರ್' ದೊಡ್ಡ ಸುದ್ದಿಯಾಗಿದೆ. ಹಿಂದಿಯಲ್ಲಿ ವಿದ್ಯಾ ಬಾಲನ್, ಪ್ರಚೋದಕ ನಟನೆ ತೋರಿಸಿ 'ದಿ ಡರ್ಟಿ ಪಿಕ್ಚರ್'ನಲ್ಲಿ ರಾಷ್ಟ್ರೀಯ ಪ್ರಶಸ್ತಿಯನ್ನೇ ಕಬಳಿಸಿದರೆ, ಕನ್ನಡದಲ್ಲಿ ಈಕೆ ವಿದ್ಯಾಳಿಗಿಂತಲೂ ಒಂದು ಹೆಜ್ಜೆ ಮುಂದೆ ಹೋಗಲಿದ್ದಾಳೆ ಎಂಬ ಸುದ್ದಿ ಹಬ್ಬಿದೆ.

ಈಕೆಯ ಮೂಲ ಹೆಸರು ಜಹೀದಾ ಮಲಿಕ್. ಪಾಕಿಸ್ತಾನದಲ್ಲಿ ಇವತ್ತಿಗೂ ಜನಪ್ರಿಯ ಟೀವಿ ತಾರೆ. ನಟನೆ, ಮಾಡೆಲ್, ಕಾಮೆಡಿಯನ್– ಹೀಗೆ ಈಕೆಯ ಹಲವು ಅವತಾರಗಳಿವೆ. ಪಾಕಿಸ್ತಾನದ ಜನಪ್ರಿಯ ಸಿನಿಮಾ ನಟಿ ವೀಣಾಳನ್ನು ಹೋಲುತ್ತಿದ್ದುದರಿಂದ, ಈಕೆಗೆ ಅಲ್ಲಿ 'ಬಡವರ ವೀಣಾ' ಎಂಬ ಹೆಸರು ನೀಡಲಾಗಿತ್ತು. ಈಗ ಭಾರತಕ್ಕೆ ಕಾಲಿಟ್ಟು ಇಲ್ಲಿನ ಟೀವಿ ರಿಯಾಲಿಟಿ ಷೋ ಮತ್ತು ಸಿನಿಮಾ ರಂಗದಲ್ಲಿ ಬ್ಯುಸಿ ಆದ ಬಳಿಕ ಈಕೆಯ ಹಳೆಯ ಹೆಸರು ಮರೆತೇ ಹೋಗಿದೆ.

ಬಾಲಿವುಡ್‌ನಲ್ಲಿ ಈಕೆ ಜಾಕಿ ಶ್ರಾಫ್ ಜತೆಗೆ ನಟಿಸಿರುವ ಮೊದಲ ಚಿತ್ರ 'ದಾಲ್ ಮೆ ಕುಚ್ ಕಾಲಾ ಹೈ'. ಅದರಲ್ಲಿ 'ಮೈ ಹೂಂ ಮೇಡಂ ಮಲಾಯ್' ಎಂಬ ಐಟಂ ಸಾಂಗ್ ಪಡ್ಡೆಗಳಿಗೆ ಖುಷಿ ಕೊಡುವಂತಿದೆ ಎನ್ನುವ ಸುದ್ದಿ ಹಬ್ಬಿದ್ದೇ ತಡ, ಎರಡನೇ ಸಾಲಿನ ನಿರ್ಮಾಪಕರೆಲ್ಲ ಈಕೆಯ ಮನೆಯ ಮುಂದೆ ಕ್ಯೂ ನಿಂತಿದ್ದಾರೆ. ಈಗಾಗಲೆ 'ಮುಂಬೈ 125 ಕೆ.ಎಂ', 'ಜಿಂದಗಿ 50:50' ಮತ್ತು 'ರಜನಿ ಕಿ ತೂ ಲಗ್ ಗಯಿ' ಮುಂತಾದ ಚಿತ್ರಗಳಿಗೆ ಸಹಿ ಹಾಕಿಯೂ ಆಗಿದೆ. ಜತೆಗೆ ಕನ್ನಡ ಚಿತ್ರರಂಗದಲ್ಲೂ ಒಂದು ಹೆಜ್ಜೆ ಊರಿದ್ದಾಳೆ. ತಮಾಷೆಯ ಸಂಗತಿಯೆಂದರೆ ಈಕೆ ಪಾಕಿಸ್ತಾನದಲ್ಲಿ ನಟಿಸಿದ 8–9 ಸಿನಿಮಾಗಳಲ್ಲಿ ಯಾವುದೂ ಬರಖತ್ತಾಗಲಿಲ್ಲ! 12 ವರ್ಷಗಳ ಹಿಂದೆ 'ತೇರೆ ಪ್ಯಾರ್ ಮೆ' ಎಂಬ ಚಿತ್ರ ಸೂಪರ್‌ಹಿಟ್ ಆಗಿದ್ದು, ಅದರಲ್ಲಿ ಈಕೆಯ ಪೋಷಕ ನಟನೆ ಯಾರ ಗಮನಕ್ಕೂ ಬರಲಿಲ್ಲ. 'ಪಿಂಡ ದಿ ಕುರಿ' ಎಂಬ 7 ಕೋಟಿ ರೂಪಾಯಿ ವೆಚ್ಚದ ಇಂಡೋ–ಪಾಕ್ ನಿರ್ಮಾಣದ ಪಂಜಾಬಿ ಸಿನಿಮಾದಲ್ಲಿ ಈಕೆ ನಟಿಸಿದ್ದೂ ಪೂರ್ತಿ ಫ್ಲಾಪ್ ಆಯಿತು. ಇವತ್ತಿಗೂ ಈಕೆ ಪಾಕಿಸ್ತಾನದ ಟೀವಿಗಾಗಿ ನಿರ್ಮಿಸಿದ ರಾಜಕೀಯ ವಿಡಂಬನೆಯ ಕಾರ್ಯಕ್ರಮ 'ಹಮ್ ಸಬ್ ಉಮೀದ್ ಸೆ ಹೈ' ಯಶಸ್ವಿ ಕಾರ್ಯಕ್ರಮ. ತುಂಬ ಚೆನ್ನಾಗಿ ರಾಜಕಾರಣಿಗಳನ್ನು ಮಿಮಿಕ್ ಮಾಡುವ ವೀಣಾ ಮಲಿಕ್, ಈ ಕಾರ್ಯಕ್ರಮದಿಂದಾಗಿ ಪಾಕಿಸ್ತಾನದಲ್ಲಿ ಮನೆ ಮಾತಾಗಿದ್ದಳು. ಹಾಸ್ಯ ದೃಶ್ಯಗಳಲ್ಲಿ ಮಿಂಚುತ್ತಾ, ತುಂಬ ಚೆನ್ನಾಗಿ ಇಂಗ್ಲಿಷ್ ಮಾತನಾಡುವ, ಸೋಶ್ಯಾಲಜಿಯಲ್ಲಿ ಬಿಎ ಮಾಡಿರುವ ವೀಣಾ ಮಲ್ಲಿಕ್ ಭಾರತದ ಟೀವಿ ಲೋಕಕ್ಕೆ ಕಾಲಿಟ್ಟ ಮೇಲೆ ಈಕೆಯ ಇಮೇಜ್ ಪೂರ್ತಿ ಬದಲಾಗಿದೆ. ಇಲ್ಲೀಗ ಈಕೆ 'ಒನ್ ಆ್ಯಂಡ್ ಓನ್ಲೀ' ಸೆಕ್ಸಿ ಐಟಂ ಡ್ಯಾನ್ಸರ್!

ವೀಣಾ ಮಲಿಕ್ 'ಬೋಲ್ಡ್ ಆ್ಯಂಡ್ ಬ್ಯೂಟಿಫುಲ್' ಅನ್ನೋದರಲ್ಲಿ ಎರಡು ಮಾತಿಲ್ಲ. ಆದರೆ ಪದೇ ಪದೇ ವಿವಾದಗಳನ್ನು ಸೃಷ್ಟಿಸುವುದರಲ್ಲೂ ಎಕ್ಸ್‌ಪರ್ಟ್. ಭಾರತೀಯ ಟೀವಿ ರಿಯಾಲಿಟಿ ಷೋ 'ಬಿಗ್‌ಬಾಸ್–4' ನಲ್ಲಿ ಭಾಗವಹಿಸಿದ್ದು ಈಕೆಯ ಖ್ಯಾತಿ ಇನ್ನಷ್ಟು ಹೆಚ್ಚಿಸಿತು. 'ಇಮಾಜಿನ್ ಟೀವಿ'ಯಲ್ಲಿ 'ವೀಣಾ ಕಾ ವಿವಾಹ್' ಎಂಬ ಕಾರ್ಯಕ್ರಮ ಶುರುವಾಗಿ, ಈಕೆಯನ್ನು ಮದುವೆಯಾಗಲು 71 ಸಾವಿರ ಎಂಟ್ರಿಗಳು ಬಂದವಂತೆ. ಆದರೆ ಕಾರ್ಯಕ್ರಮದ ಅರ್ಧದಲ್ಲೇ ಆ ಟೀವಿ ಸ್ಟೇಶನ್ನೇ ಬಂದ್ ಆಯಿತು! ಎಫ್‌ಎಚ್‌ಎಂ ಮ್ಯಾಗಸಿನ್‌ನ ಮುಖಪುಟದ ಮೇಲೆ ಈಕೆಯ ಬೆತ್ತಲೆ ಚಿತ್ರ ಪ್ರಕಟವಾಗಿ, ಅದರಲ್ಲಿ ತೋಳಿನ ಮೇಲೆ ಐಎಸ್‌ಐ ಎಂದು ಬರೆದದ್ದು ಪಾಕಿಸ್ತಾನದಲ್ಲಿ ಆಡಳಿತದ ಕಣ್ಣು ಕೆಂಪಗಾಗಿಸಿತ್ತು. 'ಶಾರೂಕ್, ಸಲ್ಮಾನ್ ಇಬ್ಬರದ್ದೂ ಓವರ್ ಆ್ಯಕ್ಟಿಂಗ್; ಭಾರತದಲ್ಲಿ ನಟ ಅಂದರೆ ಅಮೀರ್ ಖಾನ್ ಒಬ್ಬನೇ' ಎಂಬ ಈಕೆಯ ಹೇಳಿಕೆಯೂ ವಿವಾದ ಸೃಷ್ಟಿಸಿತು. ಸದ್ಯಕ್ಕೆ ಈಕೆಯ ಅರೆಬೆತ್ತಲೆ ಚಿತ್ರ, ಐಟಂ ಸಾಂಗ್‌ಗಳ ಪ್ರಚಾರ ಎಷ್ಟು ಜೋರಾಗಿ ಸಾಗಿದೆಯೆಂದರೆ, ಈಕೆ ವಿಶ್ವ ಆರೋಗ್ಯ ಸಂಸ್ಥೆಗಾಗಿ 2 ವರ್ಷ ಕೆಲಸ ಮಾಡಿದ್ದು, ಪಾಕಿಸ್ತಾನದಲ್ಲಿ ಅನಾಥ ಮಕ್ಕಳ ಆರೈಕೆಗೆ ಎನ್‌ಜಿಒ ಒಂದನ್ನು ಕಟ್ಟಿದ್ದು– ಎಲ್ಲವೂ ಜನರಿಗೆ ಮರೆತು ಹೋಗಿದೆ. ಒಪ್ಪಿಕೊಂಡಿರುವ ಸಿನಿಮಾಗಳಲ್ಲೂ ಈಕೆಗೆ ನಟಿಸುವ ಬದಲು ಕುಣಿಯುವುದೇ ಹೆಚ್ಚಾದಂತಿದೆ.



## ಬಾಂಡ್ ಮತ್ತು ಬ್ಯಾಟ್‌ಮನ್

ಕ್ರಿಸ್ಟೋಫರ್ ನೊಲಾನ್ ಹಾಲಿವುಡ್‌ನ ಅತ್ಯಂತ ಯಶಸ್ವಿ ನಿರ್ದೇಶಕ, ನಿರ್ಮಾಪಕ, ಚಿತ್ರ ಕಥೆಗಾರ. ಈತ ನಿರ್ಮಿಸಿರುವ ಬ್ಯಾಟ್‌ಮನ್ ಸರಣಿಯ ಚಿತ್ರಗಳು ಜಗತ್ತಿನಾದ್ಯಂತ ಬಾಕ್ಸ್ ಆಫೀಸ್ ದಾಖಲೆ ಮಾಡಿದ್ದಲ್ಲದೆ, ಲಕ್ಷಾಂತರ ಪ್ರೇಕ್ಷಕರನ್ನು ರಂಜಿಸಿದೆ. ಇದೀಗ ಬ್ಯಾಟ್‌ಮನ್ ಸರಣಿಯ ಮೂರನೆಯ ಹಾಗೂ ಕೊನೆಯ ಸಿನಿಮಾ 'ಡಾರ್ಕ್ ನೈಟ್ ರೈಸಸ್' ಬಿಡುಗಡೆಯ ಜ್ವರ ಏರತೊಡಗಿದೆ. ಜುಲೈ 20ರಂದು ಬಿಡುಗಡೆಯಾಗಲಿರುವ ಈ ಸಿನಿಮಾದ ಪೂರ್ವಭಾವಿ ಪ್ರಚಾರ ಭರ್ಜರಿಯಾಗಿ ನಡೆದಿದೆ. 250 ದಶಲಕ್ಷ ಡಾಲರ್ ವೆಚ್ಚದ, 165 ನಿಮಿಷಗಳ ಈ ಸಿನಿಮಾ ಹಾಲಿವುಡ್‌ನ ಆ್ಯಕ್ಷನ್ ಸಿನಿಮಾಗಳ ಸಾಲಿನಲ್ಲೇ ಅತ್ಯಂತ ದೀರ್ಘ ಸಿನಿಮಾ ಎನ್ನಲಾಗಿದೆ.

ಬ್ರಿಟಿಶ್ ಅಮೆರಿಕನ್ ಪ್ರಜೆಯಾಗಿರುವ ಕ್ರಿಸ್ಟೋಫರ್ ನೊಲಾನ್, ಏಳರ ಎಳವೆಯಲ್ಲೇ ಅಪ್ಪನ ಕ್ಯಾಮೆರಾ ಹಿಡಿದು ಆಟವಾಡತೊಗಿದವನು. ಲಂಡನ್ ಯೂನಿವರ್ಸಿಟಿ ಕಾಲೇಜಿನಲ್ಲಿ ಇಂಗ್ಲಿಷ್ ಸಾಹಿತ್ಯದ ಪದವಿ ಪಡೆದರೂ ಈತನ ಒಲವು ಸೈಕಾಲಜಿ ಕಡೆಗೇ ಹೆಚ್ಚು. ಕಾಲೇಜಿನಲ್ಲಿ ಇರುವಾಗಲೇ ಕಿರುಚಿತ್ರಗಳನ್ನು ಮಾಡಿ ಹೆಸರು ಗಳಿಸಿದಾತ. 12 ವರ್ಷಗಳ ಹಿಂದೆ ಈತ ನಿರ್ದೇಶಿಸಿದ 'ಮೆಮೆಂಟೋ' ಎಂಬ ಚಿತ್ರ ಇವತ್ತಿಗೂ ಸಸ್ಪೆನ್ಸ್‌ಪ್ರಿಯರ ಅಚ್ಚುಮೆಚ್ಚು.

ಅಂದ ಹಾಗೆ ನೊಲಾನ್ ಇನ್ನು ಮುಂದೆ ಬ್ಯಾಟ್‌ಮನ್ ಸರಣಿಯ ಚಿತ್ರಗಳನ್ನು ಮಾಡುವುದಿಲ್ಲವಂತೆ. ಅವನಿಗೆ ಜೇಮ್ಸ್ ಬಾಂಡ್ ಸಿನಿಮಾ ನಿರ್ದೇಶಿಸುವ ಆಸೆ ಚಿಗುರಿದೆಯಂತೆ. ಸ್ಯಾಮ್ ಮೆಂಡಿಸ್ ನಿರ್ದೇಶನದ ಡೇನಿಯಲ್ ಕ್ರೇಗ್ ಮೂರನೇ ಬಾರಿ ಬಾಂಡ್ ಆಗಿರುವ 'ಸ್ಕೈ ಫಾಲ್' ನವೆಂಬರ್‌ನಲ್ಲಿ ಬಿಡುಗಡೆಯಾಗುವ ನಿರೀಕ್ಷೆ ಇದೆ. ಆ ಬಳಿಕ ನೊಲಾನ್‌ನ ಹೊಸ ಬಾಂಡ್ ಸಿನಿಮಾ ತೆರೆಗಪ್ಪಳಿಸಬಹುದು.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65